# ‘ಗುರುವಾಕ್ಯ ಪರಿಪಾಲನೆಯೇ ಸರ್ವಶ್ರೇಷ್ಠ ಸಾಧನೆ’

## (ಹರಿದ್ವಾರದ ಕಂಖಲ್‌ನಲ್ಲಿರುವ ರಾಮಕೃಷ್ಣ ಮಿಷನ್ ಸೇವಾಶ್ರಮ ಹುಟ್ಟಿ ಬೆಳೆದ ಬಗೆ)



**ವಿರಾಜ್ ಮಂಗಲಗಿ**

ಹರಿದ್ವಾರದ ರಾಮಕೃಷ್ಣ ಮಿಷನ್ ಸೇವಾಶ್ರಮವು ಐತಿಹಾಸಿಕ ಹಿನ್ನೆಲೆಯಿಂದಲೂ ಹಲವು ಸೇವಾಕಾರ್ಯಗಳಿಂದಲೂ ಉತ್ತರಾಖಂಡದ ಒಂದು ಮಹತ್ವದ ಆಧ್ಯಾತ್ಮಿಕ ಸೇವಾಕೇಂದ್ರವಾಗಿದೆ. ಈ ಕುರಿತು ಬರೆದಿರುವ ಲೇಖಕರು ಗುಲ್ಬರ್ಗಾ ನಿವಾಸಿಗಳು. ರಾಮಕೃಷ್ಣ ಆಶ್ರಮದ ಭಕ್ತರೂ ಆಗಿರುವ ಅವರು ಹಲವಾರು ಬಗೆಯ ಸೇವಾಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಒಮ್ಮೆ ಶ್ರೀರಾಮಕೃಷ್ಣರು ತಮ್ಮ ಕೋಣೆಯಲ್ಲಿ ನರೇಂದ್ರ (ಸ್ವಾಮಿ ವಿವೇಕಾನಂದರು) ಹಾಗೂ ಇತರ ಶಿಷ್ಯರೊಂದಿಗೆ ಕುಳಿತಿದ್ದಾರೆ. ವೈಷ್ಣವ ಸಿದ್ಧಾಂತದ ವಿಷಯವಾಗಿ ಸಂಭಾಷಣೆ ನಡೆಯುತ್ತಿದೆ. ಶ್ರೀರಾಮಕೃಷ್ಣರು ಹೇಳುತ್ತಿದ್ದಾರೆ: ‘‘ಚೈತನ್ಯ ಮಹಾಪ್ರಭುವಿನ ಸಂದೇಶದ ಪ್ರಕಾರ ಅವನ ಅನುಯಾಯಿಗಳು ಮೂರು ಪ್ರಮುಖವಾದ ಅಂಶಗಳನ್ನು ಅಭ್ಯಾಸ ಮಾಡುತ್ತ ಸಾಧನ ಪಥದಲ್ಲಿ ಮುಂದುವರಿಯಬೇಕು. ಭಗವನ್ನಾಮದಲ್ಲಿ ಅಭಿರುಚಿ, ವೈಷ್ಣವ ಭಕ್ತರ ಸೇವೆ ಹಾಗೂ ಜೀವರಲ್ಲಿ ದಯೆ.’’

‘ಸಕಲ ಜೀವರಲ್ಲಿ ದಯೆ’ ಎಂಬ ವಿಚಾರವಾಗಿ ಚರ್ಚೆ ನಡೆಯುತ್ತಿದ್ದಾಗ ಶ್ರೀರಾಮಕೃಷ್ಣರು ಸಮಾಧಿಸ್ಥರಾಗಿಬಿಟ್ಟರು. ಸ್ವಲ್ಪ ಸಮಯದ ನಂತರ ಅರ್ಧ-ಭಾವಾವಸ್ಥೆಗೆ ಮರಳಿ ನಿಧಾನವಾಗಿ ಹೇಳುತ್ತಿದ್ದಾರೆ: ‘‘ಜೀವಿಗಳ ಮೇಲೆ ದಯೆ ತೋರಿಸುವುದೆ? ಜೀವಿಗಳಿಗೆ ದಯೆ ತೋರಿಸಲು ನೀನಾರು? ಇಲ್ಲ ಅದು ಖಂಡಿತ ಸಾಧ್ಯವಿಲ್ಲ. ಜೀವನಲ್ಲಿ ಶಿವನನ್ನು ಕಂಡು ಸೇವೆ ಸಲ್ಲಿಸಬೇಕು. ಜೀವನಲ್ಲ ಶಿವ; ಜೀವನಲ್ಲ ಶಿವ!’’

ಸೂಕ್ಷ್ಮಮತಿಯಾದ ನರೇಂದ್ರನು ಶ್ರೀರಾಮಕೃಷ್ಣರ ಈ ದಿವ್ಯವಾಣಿಯಲ್ಲಿ ನೂತನ ಆಧ್ಯಾತ್ಮಿಕ ಬೆಳಕನ್ನು ಕಂಡುಕೊಂಡು ಉತ್ಸಾಹಿತನಾಗಿ ಇತರರಿಗೆ ಹೇಳುತ್ತಾನೆ; ‘‘ಜೀವಿಗಳಿಗೆ ದಯೆ ತೋರಿಸುವುದು ಎಂದಾಗ ನಾನು ಉತ್ತಮ ಸ್ಥಿತಿಯಲ್ಲಿದ್ದೇನೆ, ನೀನು ಹೀನ ಸ್ಥಿತಿಯಲ್ಲಿರುವೆ. ನನ್ನ ದಯೆಯಿಂದಾಗಿಯೇ ನಿನ್ನ ಜೀವನ ನಡೆಯುತ್ತಿದೆ ಎಂಬ ಅಹಂಭಾವ ಸಾಧಕನಲ್ಲಿ ಉಂಟಾಗುತ್ತದೆ. ಸರ್ವರಲ್ಲಿಯೂ ಅದೇ ಭಗವಂತನಿದ್ದಾನೆ ಎಂಬ ಉನ್ನತ ಮಟ್ಟದ ಭಾವದಿಂದ ನಾವು ಪ್ರತಿಯೊಬ್ಬರಿಗೂ ಸೇವೆ ಸಲ್ಲಿಸಬೇಕು.’’ ಮುಂದುವರಿಸುತ್ತ ಹೇಳುತ್ತಾನೆ; ‘‘ಇಂದು ಶ್ರೀರಾಮಕೃಷ್ಣರ ಮಾತಿನಲ್ಲಿ ನಾನು ಎಂಥ ಅತ್ಯುನ್ನತವಾದ ಜ್ಞಾನವನ್ನು ಕಂಡುಕೊಂಡೆ! ಶುಷ್ಕ, ಕಠೋರ, ಪ್ರೇಮಹೀನವೆಂದು ಪ್ರಸಿದ್ಧವಾಗಿರುವ ವೇದಾಂತ ಸಂದೇಶವನ್ನು ಭಕ್ತಿಯೊಡನೆ ಒಂದುಗೂಡಿಸಿ ಎಂಥ ಸರಳವೂ ಮಧುರವೂ ಆದ ವ್ಯಾಖ್ಯಾನವನ್ನು ನೀಡಿದರು! ಅದ್ವೈತ ಜ್ಞಾನವನ್ನು ಪಡೆದರೆ ಪ್ರಪಂಚವನ್ನು ತ್ಯಜಿಸಿ ಕಾಡಿಗೆ ಹೋಗಬೇಕು ಮತ್ತು ಭಕ್ತಿ, ಪ್ರೀತಿ ಮುಂತಾದ

ಕೋಮಲ ಭಾವಗಳನ್ನು ಹೃದಯದಿಂದ ಕಿತ್ತೆಸೆಯಬೇಕು — ಈ ಮಾತನ್ನು ಇಷ್ಟುಕಾಲವೂ ಹೇಳುತ್ತಾ ಬಂದಿದ್ದೇವೆ. ವೇದಾಂತವನ್ನು ಜನ ಅಪಾರ್ಥ ಮಾಡಿಕೊಂಡಿರುವುದರ ಪರಿಣಾಮವಾಗಿ ಪ್ರಪಂಚ ಮತ್ತು ಅದರಲ್ಲಿರುವ ಪ್ರತಿಯೊಬ್ಬ ವ್ಯಕ್ತಿಗಳನ್ನು ಧರ್ಮ ಮಾರ್ಗಕ್ಕಿರುವ ಅಡಚಣೆಗಳೆಂದು ಪರಿಗಣಿಸಿ ಅವರ ಬಗ್ಗೆ ತಿರಸ್ಕಾರ ಭಾವನೆಯಿಂದ ವರ್ತಿಸುತ್ತಾರೆ. ಅದೇ ಸಾಧಕನ ಅವನತಿಗೆ ಕಾರಣವಾಗುತ್ತದೆ. ಇಂದು ಶ್ರೀರಾಮಕೃಷ್ಣರ ಮಾತಿನಿಂದ ತಿಳಿದುಬರುವುದೇನೆಂದರೆ ಕಾಡಿನಲ್ಲಿರುವ ವೇದಾಂತವನ್ನು ಮನೆಗೆ ತರಬೇಕು ಹಾಗೂ ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಕೂಡ ಅದನ್ನು ಅನುಷ್ಠಾನಗೊಳಿಸುವಂತೆ ಮಾಡಬೇಕು... ''

ನರೇಂದ್ರ ಭಾವೋನ್ಮತ್ತನಾಗಿ ಶ್ರೀರಾಮಕೃಷ್ಣರ ಈ ವಿನೂತನ ಸಂದೇಶವನ್ನು ವಿವರಿಸುತ್ತ ಹೇಳುತ್ತಾನೆ: ''ಏನೇ ಆಗಲಿ ಭಗವಂತನು ನನಗೆ ಅವಕಾಶ ಕೊಟ್ಟಿದ್ದೇ ಆದರೆ ನಾನು ಈ ಪರಮಸತ್ಯವನ್ನು ವಿಶ್ವದ ಎಲ್ಲೆಡೆ ಪ್ರಚಾರ ಮಾಡುತ್ತೇನೆ. ಪಂಡಿತರು–ಮೂರ್ಖರು, ಶ್ರೀಮಂತರು–ಬಡವರು, ಬ್ರಾಹ್ಮಣರು–ಅಸ್ಪೃಶ್ಯರು ಎಲ್ಲರೂ ಈ ಸತ್ಯವನ್ನು ಅರಿಯುವಂತೆ ಮಾಡುತ್ತೇನೆ.''

ಶ್ರೀರಾಮಕೃಷ್ಣರು ತಮ್ಮ ಆಧ್ಯಾತ್ಮಿಕ ಅನುಭವದಿಂದ ಪಡೆದುಕೊಂಡ ಪ್ರಾಯೋಗಿಕ ಕರ್ಮಯೋಗದ ಸಿದ್ಧಾಂತವನ್ನು ಮುಂದೆ 'ತ್ಯಾಗ ಮತ್ತು ಸೇವೆ' ಎಂಬ ಆದರ್ಶಗಳ ಮೂಲಕ ಜಗತ್ತಿಗೆ ಬೋಧಿಸಿ ಹೊಸ ಆಧ್ಯಾತ್ಮಿಕ ಮಾರ್ಗವನ್ನು ತೋರಿಸಿಕೊಟ್ಟವರು ಸ್ವಾಮಿ ವಿವೇಕಾನಂದರು. ಕರ್ಮಯೋಗದ ಪ್ರಾಮುಖ್ಯತೆಯನ್ನು ಉಪದೇಶಿಸಿದ ಗೀತಾಚಾರ್ಯ ಶ್ರೀಕೃಷ್ಣನನ್ನು ಬಿಟ್ಟರೆ, ಮತ್ತೊಮ್ಮೆ ಅಧಿಕೃತವಾಗಿ ಜನಮನಗಳಲ್ಲಿ ಬಿತ್ತಿಸಿ ಅನುಷ್ಠಾನಗೊಳಿಸಿದವರು ನವಯುಗಾಚಾರ್ಯರಾದ ಸ್ವಾಮಿ ವಿವೇಕಾನಂದರು. 'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ' ಎಂಬ ಧ್ಯೇಯವಾಕ್ಯದೊಂದಿಗೆ 'ರಾಮಕೃಷ್ಣ ಮಠ ಮತ್ತು ಮಿಷನ್' ಎಂಬ ಮಹಾಸಂಘವನ್ನು ಸ್ಥಾಪಿಸಿ, ವಟವೃಕ್ಷದಂತೆ ನೂತನ ಸಂನ್ಯಾಸಿಗಳನ್ನು ನಿರ್ಮಾಣಮಾಡಿ ಜ್ಞಾನ, ಭಕ್ತಿ, ಧ್ಯಾನ ಯೋಗಗಳ ಜೊತೆಗೆ ಕರ್ಮಯೋಗವನ್ನು ಸಮನ್ವಯಗೊಳಿಸಿದವರು ಸ್ವಾಮಿ ವಿವೇಕಾನಂದರು.

'ಜೀವನದಲ್ಲಿ ಶಿವನನ್ನು ಕಂಡು ಸೇವೆ ಮಾಡು' ಎಂಬ ಆಧುನಿಕ ಋಷಿವಾಣಿಯ ಕರೆಗೆ ಓಗೊಟ್ಟು, ಅಸಂಖ್ಯ ಯುವಕರು ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿ ಸೇವೆಯ ದೀಕ್ಷೆಯನ್ನು ಸ್ವೀಕರಿಸಿ ಕೃತಾರ್ಥರಾಗಿದ್ದಾರೆ. ಉತ್ತರಖಂಡ ಹರಿದ್ವಾರದ ಅನತಿ ದೂರದಲ್ಲೇ ಕಂಖಲ್ ಎಂಬ ಪ್ರದೇಶದಲ್ಲಿ 'ರಾಮಕೃಷ್ಣ ಮಿಷನ್ ಸೇವಾಶ್ರಮ'ದ ಸ್ಥಾಪಕರಾದ ಇಬ್ಬರು ತ್ಯಾಗಿ ಪುರುಷರ ಉಜ್ವಲವಾದ ಜೀವನ ಹಾಗೂ ನಮ್ಮ ಕಲ್ಪನೆಗೂ ನಿಲುಕದ ಅವರ ಸೇವೆಯ ಆದರ್ಶ ರಾಮಕೃಷ್ಣ ಮಹಾಸಂಘದಲ್ಲಿಯೇ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹದು.

ಹರಿದ್ವಾರದ ಕಂಖಲ್ ಎಂಬುದು ಪುರಾತನ ಯಜ್ಞಭೂಮಿ. ಈ ಸ್ಥಳದಲ್ಲಿಯೇ ದಕ್ಷಪ್ರಜಾಪತಿ ದೊಡ್ಡ ಯಾಗವನ್ನು ಮಾಡಿದನು. ಶಿವನ ಸತಿ, ಪತಿನಿಂದನೆಯನ್ನು ಸಹಿಸಲಾರದೆ ಅಪಮಾನಿತಳಾಗಿ ಹೋಮಾಗ್ನಿಗೆ ಧುಮುಕಿ ಪ್ರಾಣತ್ಯಾಗವನ್ನು ಮಾಡಿದಳು. ಇಲ್ಲಿನ ಬ್ರಹ್ಮಕುಂಡ ಪವಿತ್ರತಮ ತೀರ್ಥ. ಪುರಾಣಗಳ ಪ್ರಕಾರ ಅಮೃತದ ಹನಿಗಳು ಬಿದ್ದ ನಾಲ್ಕು ಪುಣ್ಯಕ್ಷೇತ್ರಗಳಲ್ಲಿ ಇದೂ ಒಂದು. ಇದು ಅಸಂಖ್ಯ ಸಂತ–ಮಹಾತ್ಮರ ತಪೋಭೂಮಿ. ಪತಿತ ಪಾವನ ಗಂಗೆಯಂತೆ ಸಹಸ್ರಾರು ವರ್ಷಗಳಿಂದ ಆಧ್ಯಾತ್ಮಿಕ ಚೈತನ್ಯ ನಿರಂತರವಾಗಿ ಹರಿಯುತ್ತಿರುವ ಪರಮ ಪವಿತ್ರವಾದ ದೇವಭೂಮಿ ಇದು. ಕೋಟಿಗಟ್ಟಲೆ ಯಾತ್ರಾರ್ಥಿಗಳ ಶ್ರದ್ಧಾಭಕ್ತಿಯ ತಾಣವಿದು. ಹರಿದ್ವಾರ ನಿಜವಾಗಿಯೂ ಭಗವಂತನೆಡೆಗೆ ಕೊಂಡೊಯ್ಯುವ ದ್ವಾರವೇ ಆಗಿದೆ.

ಇಂದಿಗೂ ಇಲ್ಲೊಂದು ದೊಡ್ಡ ಪ್ರಮಾಣದಲ್ಲಿ ಯಾಗ ನಡೆಯುತ್ತಿದೆ. ೧೨೩ ವರ್ಷಗಳ ಹಿಂದೆ ಆರಂಭವಾದ ಈ ಯಜ್ಞಕಾರ್ಯದಲ್ಲಿ ಯಜ್ಞಕುಂಡದ ಭೌತಿಕ ಅಗ್ನಿಯೇ ಇಲ್ಲ, ಧೂಪದೀಪಗಳಿಲ್ಲ, ತುಪ್ಪ ಹವಿಸ್ಸುಗಳಿಲ್ಲ, ವೇದ–ಮಂತ್ರಗಳಿಲ್ಲ. ಸ್ವಾಮೀಜಿಯವರಿಂದ ಪ್ರೇರೇಪಿತರಾದ ಇಬ್ಬರು ಯುವ ಸಂನ್ಯಾಸಿಗಳಿಂದ ಸ್ಥಾಪಿತವಾದ, ಪ್ರಸ್ತುತ ಯುಗಧರ್ಮಕ್ಕೆ ಬೇಕಾಗಿರುವ ಸೇವಾಯಜ್ಞ. ಈ ಯಜ್ಞಕುಂಡದಲ್ಲಿ ತಮ್ಮ ಜೀವನವನ್ನೇ ಹವಿಸ್ಸನ್ನಾಗಿ ಸಮರ್ಪಿಸಿದ ಯತಿವರೇಣ್ಯರಾದ ಸ್ವಾಮಿ ಕಲ್ಯಾಣಾನಂದರು ಮತ್ತು ಸ್ವಾಮಿ ನಿಶ್ಚಯಾನಂದರ ಜೀವನಾದರ್ಶ ರೋಮಾಂಚನಕಾರಿಯಾದದ್ದು.

ಸ್ವಾಮಿ ಕಲ್ಯಾಣಾನಂದರ ಪೂರ್ವಾಶ್ರಮದ ನಾಮಧೇಯ ದಕ್ಷಿಣಾರಂಜನ್ ಗುಹ. ೧೮೭೪ರಲ್ಲಿ ಈಗಿನ ಬಾಂಗ್ಲಾದೇಶದ ಬರಿಸಾಲ್ ಜಿಲ್ಲೆಯ ಹನುವಾ ಎಂಬ ಸಣ್ಣ ಗ್ರಾಮದಲ್ಲಿ ಜನಿಸಿದರು. ತಂದೆತಾಯಿಗಳು ಬಡವರಾದರೂ ದೈವಭಕ್ತರು, ಗೌರವಾನ್ವಿತರು. ಚಿಕ್ಕವಯಸ್ಸಿನಲ್ಲಿಯೇ ತಂದೆ ಮರಣ ಹೊಂದಲು, ತಾಯಿಯ ಪ್ರೀತಿಯ ಆರೈಕೆಯಲ್ಲಿ ಬೆಳೆಯುತ್ತ ದಯೆ–ಕರುಣೆ, ದೈವಶ್ರದ್ಧೆ, ಕಷ್ಟಸಹಿಷ್ಣುತೆ ಮೊದಲಾದ ಸದ್ಗುಣಗಳನ್ನು ಮೈಗೂಡಿಸಿಕೊಂಡನು. ಲೌಕಿಕ ವಿದ್ಯೆಯಲ್ಲಿ ಅನಾಸಕ್ತನಾದ ಬಾಲಕನು, ಕೇವಲ ಧಾರ್ಮಿಕ ಗ್ರಂಥಗಳನ್ನು ಓದುವುದರಲ್ಲಿಯೇ ನಿರತನಾದನು. ಸುರೇಶಚಂದ್ರರು ರಚಿಸಿದ 'ಶ್ರೀರಾಮಕೃಷ್ಣ ಉಪದೇಶ' ಪುಸ್ತಕವನ್ನು ಓದಿದ ಮೇಲೆ ಅವನೊಳಗಿನ ಭಗವದನ್ವೇಷಣೆ ಜಾಗೃತವಾಯಿತು. ಸ್ವಾಮಿ ವಿವೇಕಾನಂದರ ಪಶ್ಚಿಮದೇಶಗಳಲ್ಲಿನ ವೇದಾಂತ ಪ್ರಚಾರದ ವಿಜಯಪತಾಕೆಯನ್ನು ಭಾರತದ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರು. ದಕ್ಷಿಣರಂಜನನು ಒಂದು ಶಬ್ದವನ್ನೂ ಬಿಡದೆ ಆಸಕ್ತನಾಗಿ ಓದುತ್ತಿದ್ದನು. ಪ್ರಾಪಂಚಿಕ ಭೋಗ–ಭಾಗ್ಯಗಳು ಅವನಿಗೆ ಬಹಳ ತುಚ್ಛವಾಗಿ ಕಂಡವು. ಒಂದು ಮಹೋನ್ನತ ಆದರ್ಶಕ್ಕಾಗಿ ತನ್ನ ಜೀವನವನ್ನು



ಸ್ವಾಮಿ ಕಲ್ಯಾಣಾನಂದರು

ಮುಡಿಪಾಗಿಡುವ ಉದ್ದೇಶದಿಂದ ೧೮೯೭ರಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ ರಾಮಕೃಷ್ಣ ಮಹಾಸಂಘಕ್ಕೆ ಸೇರಿದನು.

ರಾಮಕೃಷ್ಣ ಸಂಘವು ಆಗ ನೀಲಾಂಬರ ಬಾಬುವಿನ ಬಾಡಿಗೆ ಮನೆಯಲ್ಲಿತ್ತು. ಯಾರ ಕುರಿತಾಗಿ ದಕ್ಷಿಣರಂಜನನು ಪತ್ರಿಕೆಗಳಲ್ಲಿ ಓದುತ್ತಿದ್ದನೋ ಅವರ ಪ್ರತ್ಯಕ್ಷದರ್ಶನ ಭಾಗ್ಯವೀಗ ಲಭಿಸಿತು. ಇದರಿಂದ ಅತ್ಯಂತ ಆನಂದಿತನಾದ ಅವನು ಸ್ವಾಮೀಜಿಯವರ ಮತ್ತು ಶ್ರೀರಾಮಕೃಷ್ಣರ ನೇರ ಶಿಷ್ಯರ ಮಾರ್ಗದರ್ಶನದಲ್ಲಿ ಆಧ್ಯಾತ್ಮಿಕ ಜೀವನವನ್ನು ರೂಪಿಸಿಕೊಳ್ಳತೊಡಗಿದನು. ಹಳ್ಳಿಯ ಸರಳ ಮುಗ್ಧ ವಾತಾವರಣದಲ್ಲಿ ಬೆಳೆದ ದಕ್ಷಿಣರಂಜನನನ್ನು ಪರೀಕ್ಷಿಸುವ ಸಲುವಾಗಿ ಒಮ್ಮೆ ಸ್ವಾಮಿ ವಿವೇಕಾನಂದರು, ''ನೋಡು, ಒಂದು ವೇಳೆ ನನಗೆ ಹಣದ ಆವಶ್ಯಕತೆಯುಂಟಾದಾಗ ನಾನು ನಿನ್ನನ್ನು ಟೀ ತೋಟದ ಯಜಮಾನನಿಗೆ ಮಾರುತ್ತೇನೆ. ನೀನದಕ್ಕೆ ಒಪ್ಪುವೆಯಾ''? ಎಂದು ಕೇಳಿದರು. ತತ್‌ಕ್ಷಣ ದಕ್ಷಿಣರಂಜನ್ ತನ್ನ ಸಮ್ಮತಿಯನ್ನು ಸೂಚಿಸಿದ. ಸ್ವಾಮೀಜಿ ಅವನ ಉತ್ಕಟವಾದ ಗುರುಭಕ್ತಿಯನ್ನು ಪ್ರಶಂಸಿಸುತ್ತ, ಅವನಲ್ಲಿದ್ದ ವಿವೇಕ, ವೈರಾಗ್ಯ, ಶ್ರದ್ಧಾಭಕ್ತಿಗಳು, ಶಮದಮಾದಿ ಸುಗುಣಗಳು ಹಾಗೂ ಸೇವಾತತ್ಪರತೆಯನ್ನು ಕಂಡು ಆನಂದಿಸಿದರು. ಅವನಿಗೆ ಸಂನ್ಯಾಸ ದೀಕ್ಷೆಯನ್ನು ಅನುಗ್ರಹಿಸಿ 'ಸ್ವಾಮಿ ಕಲ್ಯಾಣಾನಂದ' ಎಂದು ಹೆಸರಿಟ್ಟರು.

೧೯೦೦ರಲ್ಲಿ ಸ್ವಾಮಿ ವಿವೇಕಾನಂದರು ಕಲ್ಯಾಣಾನಂದರನ್ನು ಕುರಿತು, ''ನೋಡು ಕಲ್ಯಾಣ, ಹರಿದ್ವಾರ ಹೃಷಿಕೇಶ ಮೊದಲಾದ ಪರ್ವತ ಪ್ರಾಂತಗಳಲ್ಲಿ ತಪಸ್ಸನ್ನಾಚರಿಸುವ ಅನೇಕ ವೃದ್ಧ ಸಾಧುಗಳು ಅಸಹಾಯಕರಾಗಿ ಅನಾರೋಗ್ಯದಿಂದ ಕಷ್ಟಪಡುತ್ತಿರುತ್ತಾರೆ. ಅವರಿಗಾಗಿ ನೀನೇದರೂ ಮಾಡಬಲ್ಲೆಯಾ? ಅಲ್ಲಿ ಅವರಿಗೆ ಯಾವುದೇ ವೈದ್ಯಕೀಯ ಚಿಕಿತ್ಸೆ ಸಿಗುತ್ತಿಲ್ಲ. ಅವರ ಬಗ್ಗೆ ಯಾರೂ ಕಾಳಜಿ ವಹಿಸುವವರಿಲ್ಲ. ಅವರ ಸೇವೆಗಾಗಿ ನೀನು ಹರಿದ್ವಾರಕ್ಕೆ ಹೊರಡು... ಬಂಗಾಳವನ್ನು ಮರೆತು ಬಿಡು! ಮರಳಿ ಬರಬೇಡ, ಹೋಗು!'' ಎಂದು ಆಜ್ಞಾಪಿಸಿದರು.

ಶ್ರೀಗುರುವಿನ ಆಜ್ಞೆ ಪರಿಪಾಲನೆಯೇ ಸರ್ವಶ್ರೇಷ್ಠ ಆಧ್ಯಾತ್ಮಿಕ ಸಾಧನೆಯೆಂದರಿತ ಕಲ್ಯಾಣಾನಂದರು, ಈ ಮಹಾಯಾಗವನ್ನು ಹೇಗೆ ಪ್ರಾರಂಭಿಸುವುದು ಎಂಬುದರ ಬಗ್ಗೆ ಸ್ವಾಮಿ ಸ್ವರೂಪಾನಂದರೊಡನೆ ಚರ್ಚಿಸಲು ಮಾಯಾವತಿಗೆ ತೆರಳಿದರು. ಗುರುಭಾಯಿಗಳಿಬ್ಬರೂ ದೀರ್ಘವಾದ ಸಮಾಲೋಚನೆಯ ನಂತರ ಕಾರ್ಯ ಪ್ರಣಾಲಿಕೆಯನ್ನು ರಚಿಸಿದ ತರುವಾಯ ಹರಿದ್ವಾರದಲ್ಲಿರುವ 'ಕಂಖಲ್' ಪ್ರದೇಶದಲ್ಲಿ ಕಲ್ಯಾಣಾನಂದರು ಸೇವಾಕೇಂದ್ರವನ್ನು ಪ್ರಾರಂಭಿಸಿದರು. ೧೯೦೧ರ ಜೂನ್‌ನಲ್ಲಿ ತಿಂಗಳಿಗೆ ೩ ರೂಪಾಯಿಗಳಂತೆ ಒಂದು ಬಾಡಿಗೆ ಮನೆಯಲ್ಲಿ ಸೇವಾಶ್ರಮವನ್ನು ಸ್ಥಾಪನೆ ಮಾಡಿದರು. ರೋಗಗ್ರಸ್ತ ಸಾಧುಗಳ ಔಷಧೋಪಚಾರ, ಅವರ ಹಾಸಿಗೆ, ಊಟದ ವ್ಯವಸ್ಥೆ, ಅವರ ನಿವಾಸ, ಇನ್ನಿತರ ಉಪಯುಕ್ತವಾದ ವಸ್ತುಗಳನ್ನಿಡುವುದೂ ೨ ಕೋಣೆಗಳಿದ್ದ ಆ ಮನೆಯಲ್ಲಿಯೇ ಆಗಬೇಕಿತ್ತು. ಸ್ವಾಮಿ ಕಲ್ಯಾಣಾನಂದರು ಹೋಮಿಯೋಪತಿ ಔಷಧ ಹಾಗೂ ಕೆಲವು ವೈದ್ಯ ಉಪಕರಣಗಳನ್ನು ಹೊತ್ತು ಪರ್ವತ ಪ್ರದೇಶಗಳಲ್ಲಿ , ಕುಟೀರಗಳಲ್ಲಿ ವಾಸಿಸುವ ಸಾಧುರೋಗಿಗಳ ಆರೋಗ್ಯವನ್ನು ವಿಚಾರಿಸುತ್ತ ಅವರ ಸೇವೆ ಮಾಡುತ್ತಿದ್ದರು. ಹೆಚ್ಚಿನ ಕಾಯಿಲೆಯಿಂದಾಗಿ ಯಾತನೆ ಪಡುತ್ತಿದ್ದ ಸಾಧುಗಳನ್ನು ತಮ್ಮ ಕೋಣೆಗೆ ಕರೆತಂದು ಪ್ರಥಮ ಚಿಕಿತ್ಸೆಯನ್ನು ಸಲ್ಲಿಸಿ, ಭಿಕ್ಷೆಯಿಂದ ಸಂಪಾದಿಸಿದ ದ್ರವ್ಯದಿಂದ ತಾನೇ ಆಹಾರವನ್ನು ತಯಾರಿಸಿ ಕೊಡುತ್ತಿದ್ದರು. ೧೯೦೧, ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಒಟ್ಟು ೪೮ ಜನ ರೋಗಿಗಳ ಚಿಕಿತ್ಸೆ ಮಾಡಲಾಯಿತು.

ಸ್ವಾಮಿ ಕಲ್ಯಾಣಾನಂದರು ತಮ್ಮ ಸೇವಾಕಾರ್ಯಗಳ ಮುಂದಿನ ರೂಪವನ್ನು ಶ್ರೀಗುರುವಿನೊಡನೆ ಚರ್ಚಿಸಲು ಹಾಗೂ ಅವರ ದರ್ಶನಾಭಿಲಾಷಿಗಳಾಗಿ ಬೇಲೂರು ಮಠಕ್ಕೆ ಬಂದರು. ಸ್ವಾಮಿ ಅವರ ಕಾರ್ಯಚಟುವಟಿಕೆಗಳನ್ನು ಮೆಚ್ಚಿಕೊಂಡು, ''ಮುಂದೆ ನೀನು ಪರಮಹಂಸ ಸ್ಥಿತಿಯನ್ನು ತಲುಪುವೆ'' ಎಂದು ಆಶೀರ್ವದಿಸಿದರು. ಒಂದು ದಿನ ಸ್ವಾಮೀಜಿ; ''ನೋಡು ಕಲ್ಯಾಣ್, ನನ್ನ ಆಸೆ ಏನೆಂದರೆ, ಸೇವಾಶ್ರಮದಲ್ಲಿ ಒಂದು ಕಡೆ ಶ್ರೀರಾಮಕೃಷ್ಣರ ಮಂದಿರವಿರಬೇಕು. ಅಲ್ಲಿ ಸಾಧು-ಬ್ರಹ್ಮಚಾರಿಗಳು ಜಪಧ್ಯಾನವನ್ನು ಮಾಡಬೇಕು. ಇನ್ನೊಂದು ಕಡೆ ಯಾವುದನ್ನು ಧ್ಯಾನ ಮಾಡುತ್ತಾರೋ ಅದನ್ನು ಕೃತಿಗಿಳಿಸಬೇಕು'' ಎಂದರು. ವೇದಾಂತ ಕೇವಲ ಸಿದ್ಧಾಂತ ಮಾತ್ರವಲ್ಲ, ಅನುಷ್ಠಾನಯೋಗ್ಯವಾದುದು, ಮಾತಿನಲ್ಲಿ ಅಲ್ಲದೆ ಕೃತಿಯಲ್ಲಿಯೂ ಅದನ್ನು ವ್ಯಕ್ತಗೊಳಿಸಬೇಕು ಎಂಬುದು ಸ್ವಾಮೀಜಿಯವರ ಸ್ಪಷ್ಟವಾದ ಅಭಿಪ್ರಾಯ ಸ್ವಾಮಿ ಕಲ್ಯಾಣಾನಂದರ ಹೃದಯಾಂತರಾಳವನ್ನು ಪ್ರವೇಶಿಸಿತು. ಆ ನಂತರ ಅವರ ಜೀವನವೂ ತೀವ್ರವಾದ ತಪಸ್ಸು-ಸೇವೆಯಲ್ಲಿ ಕಳೆಯಿತು.

ಸ್ವಾಮೀಜಿಯವರ ಸ್ಫೂರ್ತಿ, ಮಾರ್ಗದರ್ಶನದೊಂದಿಗೆ ಪ್ರಾರಂಭವಾದ ಕಾರ್ಯವು ಕ್ರಮೇಣ 'ಕಂಖಲ್ ಸೇವಾಶ್ರಮ'ವೆಂದು ಹೆಸರುವಾಸಿಯಾಯಿತು. ಸ್ವಾಮಿ ವಿಮಲಾನಂದರು 'ಪ್ರಬುದ್ಧ ಭಾರತ' ಮಾಸಪತ್ರಿಕೆಯಲ್ಲಿ ಬರೆದ ಮನವಿಗಳಿಂದಾಗಿ ಧನಸಹಾಯ ಒದಗಿ ಬಂತು. ೧೯೦೩ರ ಏಪ್ರಿಲ್‌ನಲ್ಲಿ ಕಲ್ಕತ್ತದ ದಾನಿಗಳೊಬ್ಬರ ಸಹಕಾರದಿಂದ ಕಂಖಲ್‌ನಲ್ಲಿ ೫ ಎಕರೆ ಭೂಮಿಯನ್ನು ಕೊಂಡುಕೊಳ್ಳಲಾಯಿತು. ಹಣದ ಅಭಾವದಿಂದಾಗಿ ಇಲ್ಲಿನ ಕೆಲವು ಗುಡಿಸಲುಗಳನ್ನು ನಿರ್ಮಿಸಿ, ಬಾಡಿಗೆ ಮನೆಯಿಂದ ಸೇವಾಶ್ರಮವನ್ನು ಇಲ್ಲಿಗೆ ಸ್ಥಳಾಂತರಿಸಲಾಯಿತು. ಮುಂದೆ ೧೯೦೫ರಲ್ಲಿ ಸ್ವಾಮಿ ವಿಜ್ಞಾನಾನಂದರ ವಾಸ್ತು ಯೋಜನೆಯಂತೆ ಎರಡು ವಿಶಾಲವಾದ ಕಟ್ಟಡಗಳು ನಿರ್ಮಾಣಗೊಂಡ ಮೇಲೆ ಸೇವಾಶ್ರಮವು ರಾಮಕೃಷ್ಣ ಮಹಾಸಂಘಕ್ಕೆ ಸೇರ್ಪಡೆಯಾಗಿ 'ರಾಮಕೃಷ್ಣ ಮಿಷನ್ ಸೇವಾಶ್ರಮ' ಎಂದು ಪ್ರಸಿದ್ಧವಾಗಿದೆ.

ಸೇವಾಶ್ರಮದ ಕಾರ್ಯಗಳು ವಿಸ್ತಾರಗೊಂಡಂತೆಲ್ಲ ಕೆಲಸವೂ ಹೆಚ್ಚಾಗತೊಡಗಿತು. ಸ್ವಾಮಿ ಕಲ್ಯಾಣನಂದರಿಗೆ ತಮ್ಮ ಜೀವನದ ಕೊನೆಯವರೆಗೂ ಸಹಕರಿಸಿದ ಇನ್ನೋರ್ವ ಯತಿಗಳು ಸ್ವಾಮಿ ನಿಶ್ಚಯಾನಂದರು. ಇವರ ಪೂರ್ವಾಶ್ರಮದ ಹೆಸರು ಸೂರಜ್ ರಾವ್. ಇವರದು ಮರಾಠ ಮನೆತನ. ದಕ್ಷಿಣ ಕರ್ನಾಟಕದ ರೆಜಿಮೆಂಟ್‌ನಲ್ಲಿ ಸೈನಿಕರಾಗಿ ದೇಶಸೇವೆ ಸಲ್ಲಿಸುತ್ತಿದ್ದರು. ರಾಯಪುರದಲ್ಲಿದ್ದಾಗ ಶ್ರೀರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ನಿರಂಜನಾನಂದರ ಪರಿಚಯದ ಮೂಲಕ ರಾಮಕೃಷ್ಣ–ವಿವೇಕಾನಂದ ಭಾವಧಾರೆಯ ಸಂಪರ್ಕವಾಯಿತು. ೧೮೯೭ರಲ್ಲಿ ಸ್ವಾಮಿ ವಿವೇಕಾನಂದರನ್ನು ಮದ್ರಾಸ್‌ನಲ್ಲಿ ಭೇಟಿಯಾಗಿ ಮಾತನಾಡುವ ಸುಯೋಗ ಲಭಿಸಿತು. ೪ ವರ್ಷಗಳ ತರುವಾಯ ಸೇನೆಯ ಜವಾಬ್ದಾರಿಯಿಂದ ನಿವೃತ್ತರಾಗಿ ತ್ಯಾಗಜೀವನವನ್ನು ನಡೆಸಲು ೧೯೦೧ರಲ್ಲಿ ಬೇಲೂರು ಮಠಕ್ಕೆ ಬಂದರು. ಸೂರಜ್‌ರಾವ್ ಸ್ವಾಮೀಜಿಯವರ ಸೇವಕರಾಗಿ ಮನಃಪೂರ್ವಕವಾಗಿ ಸೇವೆ ಸಲ್ಲಿಸಿದ್ದರು. ಇವರ ಸೇವೆಯಿಂದ ಸಂಪ್ರೀತರಾದ ಸ್ವಾಮಿಜಿ ಸಂನ್ಯಾಸದೀಕ್ಷೆಯನ್ನು ಅನುಗ್ರಹಿಸಿ 'ಸ್ವಾಮಿ ನಿಶ್ಚಯಾನಂದ' ಎಂಬ ನಾಮಧೇಯದಿಂದ ಕರೆದರು. ೧೯೦೨ರಲ್ಲಿ ಸ್ವಾಮೀಜಿಯವರ ಮಹಾಸಮಾಧಿಯ ನಂತರ ತೀರ್ಥಯಾತ್ರೆಗೆ ಹೊರಟ ಅವರು ೧೯೦೩ರ ಕುಂಭಮೇಳದಲ್ಲಿ ಪಾಲ್ಗೊಳ್ಳಲು ಹರಿದ್ವಾರಕ್ಕೆ ಬಂದರು. ಅಲ್ಲಿ ಅನಿರೀಕ್ಷಿತವಾಗಿ ಸ್ವಾಮಿ ಕಲ್ಯಾಣಾನಂದರ ಭೇಟಿಯಾಯಿತು. ಅಲ್ಲಿ ಅವರು ನಡೆಸುತ್ತಿದ್ದ ಸೇವಾಕಾರ್ಯಗಳನ್ನು ಕಂಡ ನಿಶ್ಚಯಾನಂದರು ತಮ್ಮ ಗುರುವಿನ ಆಜ್ಞೆ ಹಾಗೂ ಜೀವನದ ಮಾರ್ಗ ಕಂಡುಕೊಂಡು ಅಲ್ಲಿಯೇ ನೆಲೆನಿಂತು, ಮುಂದಿನ ೩೧ ವರ್ಷಗಳ ಕಾಲ ಪ್ರಚಂಡವಾದ ಸೇವಾಕಾರ್ಯ ಮತ್ತು ಉಜ್ವಲವಾದ ತಪಸ್ವೀ ಜೀವನವನ್ನು ನಡೆಸಿದರು. ಸ್ವಾಮಿ ಕಲ್ಯಾಣಾನಂದರು ಮತ್ತು



ಸ್ವಾಮಿ ನಿಶ್ಚಯಾನಂದರು

ಸ್ವಾಮಿ ನಿಶ್ಚಯಾನಂದರನ್ನು 'ಅಶ್ವಿನೀ ದೇವತೆ'ಗಳೆಂದು ಕರೆಯುವುದು ರೂಢಿಯಾಗಿದೆ.

ಸ್ವಾಮಿ ನಿಶ್ಚಯಾನಂದರಂತಹ ಸಮರ್ಥ ಸಹಾಯಕರು ದೊರೆತದ್ದರಿಂದ ಕಲ್ಯಾಣಾನಂದರಿಗೆ ಬಹಳ ಅನುಕೂಲವಾಯಿತು. ಹರಿದ್ವಾರದಿಂದ ಹೃಷಿಕೇಶದವರೆಗೂ ಅವರ ಸೇವೆ ವ್ಯಾಪಿಸಿತು. ಸ್ವಾಮಿ ನಿಶ್ಚಯಾನಂದರು ಬೆಳಗ್ಗೆ ಬೇಗನೆ ಎದ್ದು ಶ್ರೀಗುರುದೇವರನ್ನು ಪ್ರಾರ್ಥಿಸಿ, ವೈದ್ಯಕೀಯ ಪೆಟ್ಟಿಗೆ ಹಾಗು ಇನ್ನೂ ಕೆಲವು ಪರಿಕರಗಳ ಗಂಟನ್ನು ಹೊತ್ತುಕೊಂಡು ಹರಿದ್ವಾರದಿಂದ ೨೮ ಕಿ.ಮೀ. ಪರ್ವತಪ್ರದೇಶವನ್ನು ಏರುತ್ತ ಹೃಷಿಕೇಶವನ್ನು ತಲುಪುವರು. ಅಲ್ಲಿ ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತ ಸಾಧುಗಳ ಆರೋಗ್ಯವನ್ನು ವಿಚಾರಿಸಿ, ಸಾಧುರೋಗಿಗಳ ವೈದ್ಯೋಪಚಾರ ಮಾಡಿ ಅವರಿಗೆ ಭಿಕ್ಷೆಯಿಂದ ಸಂಗ್ರಹವಾದ ಆಹಾರದಿಂದ ಉಣಬಡಿಸುವರು. ಮತ್ತು ಮಧ್ಯಾಹ್ನದ ನಂತರ ಅವರನ್ನೆಲ್ಲ ಮತ್ತೊಮ್ಮೆ ವಿಚಾರಿಸಿ ೨೮ ಕಿ.ಮೀ. ನಡೆದುಕೊಂಡು ಹರಿದ್ವಾರಕ್ಕೆ ಬರುವರು. ಹೀಗೆ ಹಲವಾರು ವರ್ಷಗಳ ಕಾಲ, ಪ್ರತಿದಿನ ಬಿಸಿಲು, ಮಳೆ, ಚಳಿಯೆನ್ನದೆ ೫೬ ಕಿ.ಮೀ. ಕಾಲ್ನಡಿಗೆಯಲ್ಲಿಯೇ ಸಂಚರಿಸುತ್ತ ಸೇವೆ ಸಲ್ಲಿಸಿದರು. ಸ್ವಾಮಿ ವಿವೇಕಾನಂದರ ಶಿಷ್ಯರಲ್ಲದೆ ಇಂತಹ ಕಷ್ಟ ಸಹಿಷ್ಣುತೆಯನ್ನು, ಈ ಮಟ್ಟದ ಕಠಿಣ ಪರಿಶ್ರಮವಾದ ಸೇವೆಯನ್ನು ನಾವು ಯಾರಿಂದ ತಾನೇ ನಿರೀಕ್ಷಿಸಲು ಸಾಧ್ಯ ?

ಸ್ವಾಮಿಗಳಿಬ್ಬರ ಸೇವಾಹಸ್ತವು ಸಮಾಜದ ಎಲ್ಲಾ ಸ್ತರದವರನ್ನೂ ವ್ಯಾಪಿಸಿತು. ಅಸ್ಪೃಶ್ಯರೆನ್ನಿಸಿಕೊಂಡ ಗಲ್ಲಿಗಳಲ್ಲಿಯೂ ರೋಗಿ ನಾರಾಯಣರನ್ನು ಹುಡುಕಿಕೊಂಡು ಸೇವೆ ಸಲ್ಲಿಸಿದರು. ಹರಿಜನರ ಮಕ್ಕಳಿಗಾಗಿ ರಾತ್ರಿಶಾಲೆ ಆರಂಭಿಸಿದರು. ನಿರ್ಗತಿಕರ

ಶವಗಳನ್ನು ಹೊತ್ತು ಅಂತಿಮ ಸಂಸ್ಕಾರ ಮಾಡಿದರು. ಅನೇಕ ಸಂಪ್ರದಾಯಸ್ಥ ಸಂನ್ಯಾಸಿಗಳು ಇವರನ್ನು ನಿಂದಿಸಿ, 'ಭಂಗಿ ಸಾಧು'ಗಳೆಂದು ಹಿಯಾಳಿಸಿ, ಸಾಧುಗಳಿಗೆಂದೇ ನಿರ್ಮಾಣ ವಾದ ಭಿಕ್ಷಾಕೇಂದ್ರಗಳಲ್ಲಿ ಇವರಿಗೆ ಅವಕಾಶ ನೀಡದಂತೆ ಮಾಡಿ ದರು. ಆದರೆ ಶ್ರೀಗುರುವಿನ ಅನುಷ್ಠಾನ ವೇದಾಂತದ ಮೂರ್ತಿ ಗಳಾಗಿದ್ದ ಸ್ವಾಮಿಗಳು ಇದಾವುದನ್ನೂ ಲೆಕ್ಕಿಸದೆ ಅವಿಚಲರಾಗಿ ಕಾರ್ಯೋನ್ಮುಖರಾದರು.

ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯರಾದ ಸ್ವಾಮಿ ಬ್ರಹ್ಮಾ ನಂದರು ಹಾಗೂ ಇತರರು ಸಾಧನಾ ನಿರತರಾಗಿ ತಮ್ಮ ಧ್ಯಾನ ಶೀಲ ವ್ಯಕ್ತಿತ್ವದಿಂದ ಸೇವಾಶ್ರಮದಲ್ಲಿ ಉನ್ನತವಾದ ಆಧ್ಯಾತ್ಮಿಕ ವಾತಾವರಣವನ್ನು ನಿರ್ಮಾಣ ಮಾಡಿ, ಅಲ್ಲಿರುವವರನ್ನೆಲ್ಲಾ ಉತ್ತೇಜನಗೊಳಿಸಿದರು. ೧೯೦೭ರಲ್ಲಿ ಸೇವಾಶ್ರಮಕ್ಕೆ ಭೇಟಿ ಕೊಟ್ಟ ಪಂಜಾಬಿನ ಕೇಸರಿ ಲಾಲಾ ಲಜಪತ್ ರಾಯ್ ಮಾನವ ತೆಯ ಸೇವೆಗಾಗಿ ಇಲ್ಲಿ ನಡೆಯುತ್ತಿರುವ ಸೇವಾಕಾರ್ಯಗಳನ್ನು ಪ್ರಶಂಸಿದರು. ೧೬ ಮೇ ೧೯೧೦ ರಲ್ಲಿ ಸೋದರಿ ನಿವೇದಿತಾ, ಸುಪ್ರಸಿದ್ಧ ವಿಜ್ಞಾನಿ ಜಗದೀಶ ಚಂದ್ರ ಬೋಸ್ ಹಾಗೂ ಅವರ ಪತ್ನಿಯು ಸೇವಾಶ್ರಮವನ್ನು ಸಂದರ್ಶಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ನಿರಂತರವಾದ ಸೇವೆ ಹಾಗೂ ಕಠಿಣತಮವಾದ ತಪಸ್ಸಿ ನಿಂದಾಗಿ ಸ್ವಾಮಿಗಳ ಶರೀರ ಜರ್ಜರಿತವಾಯಿತು. ಶ್ರೀಗುರು ವಿನ ಆಜ್ಞೆಯನ್ನು ಚಾಚೂ ತಪ್ಪದೆ ಅನುಸರಿಸಿ, ೧೯೩೪ರಲ್ಲಿ ಸ್ವಾಮಿ ನಿಶ್ಚಲಾನಂದರು ಮತ್ತು ೧೯೩೭ರಲ್ಲಿ ಸ್ವಾಮಿ ಕಲ್ಯಾಣಾ ನಂದರು ಅಸುನೀಗಿ ಕಾಲಾತೀತರಾದರು. ಇವರ ಜೀವನವೇ ಇಂದಿಗೂ ರಾಮಕೃಷ್ಣ ಸೇವಾಶ್ರಮ ಕನ್‌ಖಲ್‌ನ ಭದ್ರವಾದ ಅಡಿಪಾಯವಾಗಿದೆ.

ಪ್ರಸ್ತುತ ಸೇವಾಶ್ರಮವು ಆಧುನಿಕ ವೈದ್ಯಕೀಯ ಯಂತ್ರೋಪ ಕರಣಗಳಿಂದ ಕೂಡಿದ ೨೧೦ ಹಾಸಿಗೆಗಳುಳ್ಳ ಸುಸಜ್ಜಿತವಾದ ಆಸ್ಪತ್ರೆ. ಅಲ್ಲಿನ ರೋಗಿ ನಾರಾಯಣರಿಗೆ ಪೌಷ್ಟಿಕ ಆಹಾರವನ್ನು ಕೊಡುವುದಕ್ಕಾಗಿ ೧೦೦ಕ್ಕೂ ಹೆಚ್ಚು ಹಸುಗಳಿರುವ ಒಂದು ಗೋಶಾಲೆ ಇದೆ. ಸಂಚಾರಿ ಆಸ್ಪತ್ರೆಯಿಂದ ಸುತ್ತಮುತ್ತಲ ಗ್ರಾಮ ಗಳಲ್ಲಿ ಅನೇಕ ಜನರು ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಪ್ರತಿವರ್ಷವೂ ಸಹಸ್ರಾರು ಸಂಖ್ಯೆಯಲ್ಲಿ ಸಾಧುಗಳಿಗೆ – ಕಡು ಬಡವರಿಗೆ ಸೇವಾಶ್ರಮ ವೈದ್ಯಕೀಯ ಸೇವೆ ಒದಗಿಸುತ್ತದೆ. ಸೇವಾಶ್ರಮದಲ್ಲಿ ಅನೇಕ ಮಂದಿ ಯತಿಗಳು, ಸ್ವಯಂಸೇವಕರು ಹಾಗೂ ಭಕ್ತರು ದಿವ್ಯತ್ರಯರ ಜೀವನ-ಸಂದೇಶಗಳನ್ನು ಅನು ಷ್ಠಾನಗೊಳಿಸುವುದಕ್ಕಾಗಿ ಆಧ್ಯಾತ್ಮಿಕ ಸಾಧನೆ ಹಾಗೂ ಜೀವ ಈಶ ಸೇವೆಯಲ್ಲಿ ನಿರತರಾಗಿದ್ದಾರೆ. ಈ ಸೇವಾಶ್ರಮಕ್ಕೆ ನಮ್ಮ ಅನಂತ ನಮನಗಳು. ✽


# ರಾಮಕೃಷ್ಣ ತಪೋವನ

(ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್, ಬೇಲೂರು ಮಠ, ಪಶ್ಚಿಮ ಬಂಗಾಳ
ಇದರ ಮಾರ್ಗದರ್ಶನದಲ್ಲಿ ನಡೆಯುವ **ಕರ್ನಾಟಕ ರಾಮಕೃಷ್ಣ-ವಿವೇಕಾನಂದ
ಭಾವ ಪ್ರಚಾರ ಪರಿಷತ್** ಇದರ ಸದಸ್ಯತ್ವ ಹೊಂದಿದ ಸಂಸ್ಥೆ)

E-mail : ramakrishnatapovan@gmail.com, website : www.ramakrishnatapovan.org

## ರಾಮಕೃಷ್ಣ ತಪೋವನ ಬಾಲಕಾಶ್ರಮ, ಪೊಳಲಿಯಲ್ಲಿ ಉಚಿತ ವಸತಿ ಸೌಲಭ್ಯ

### ಅರ್ಜಿ ಆಹ್ವಾನ

ಆರ್ಥಿಕವಾಗಿ ಹಿಂದುಳಿದ ಮತ್ತು ನಾನಾ ಕಾರಣಗಳಿಂದ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದ ಗ್ರಾಮೀಣ ಪ್ರತಿಭಾ ವಂತ ಹುಡುಗರಿಗೆ ಶಿಕ್ಷಣಕ್ಕೆ ನೆರವಾಗುವ ಅನ್ವಯ **ರಾಮಕೃಷ್ಣ ತಪೋವನ ಬಾಲಕಾಶ್ರಮವು** ಅರ್ಜಿ ಆಹ್ವಾನಿಸಿದೆ.

ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು ಹಾಗೂ ನೆರೆಯ ಜಿಲ್ಲೆಗಳ, 7ನೇ ತರಗತಿಯಲ್ಲಿ ಉತ್ತಮ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ ಸೇರಬಹುದು. ಉಚಿತ ಶಿಕ್ಷಣ, ಊಟ ಮತ್ತು ವಸತಿ ಒದಗಿಸಲಾಗುವುದು. ಜೊತೆಗೆ ಭಜನೆ, ಸಂಗೀತ, ಯಕ್ಷಗಾನ, ತೋಟಗಾರಿಕೆ, ಕಂಪ್ಯೂಟರ್, ಯೋಗ, ಶ್ರಮಸೇವೆ, ಭರತನಾಟ್ಯ, ಕರಾಟೆ ಇತ್ಯಾದಿ ತರಬೇತಿ ನೀಡಲಾಗುತ್ತದೆ. ಸುಂದರ ಹಳ್ಳಿಯ ಪರಿಸರದಲ್ಲಿ ಈ ಬಾಲಕಾಶ್ರಮವಿದ್ದು, ಆಸಕ್ತಿಯಿದ್ದ ಹುಡುಗರು 7ನೇ ತರಗತಿಯ ಪರೀಕ್ಷೆ ಮುಗಿದ ಕೂಡಲೇ ವೈಯಕ್ತಿಕ ವಿವರಗಳೊಂದಿಗೆ ದೂರವಾಣಿ ಇಲ್ಲವೆ ಅಂಚೆಯ ಮೂಲಕ ಸಂಪರ್ಕಿಸಬಹುದು. ಬಾಲಕಾಶ್ರಮದ ಪರಿಚಯ-ಮಾಹಿತಿಗಾಗಿ ವಿದ್ಯಾರ್ಥಿಗಳು ಒಂದು ವಾರ ಬಾಲಕಾಶ್ರಮದಲ್ಲಿ ಉಳಿದುಕೊಳ್ಳಬೇಕಾಗುತ್ತದೆ. ಮಕ್ಕಳ ಮೇಲ್ವಿಚಾರಣೆಯನ್ನು ಸ್ವತಃ ಸ್ವಾಮೀಜಿ ಯವರೇ ವಹಿಸಿಕೊಳ್ಳುವರು.

**ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು :**

**ರಾಮಕೃಷ್ಣ ತಪೋವನ, ಶ್ರೀರಾಜರಾಜೇಶ್ವರಿ ದೇವಸ್ಥಾನದ ಬಳಿ,**
**ಕರಿಯಂಗಳ ಗ್ರಾಮ, ಪೊಳಲಿ ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ 574 219**
ದೂರವಾಣಿ ಸಂಖ್ಯೆ : 9845165108, 9481846545, 0824-2016455, 2266655